MYSORE LEGISLATIVE ASSEMBLY

Tuesday, 22nd November 1966.

The House met in the Assembly Chamber, Vidhana Soudha at One of the Clock.

MR. SPEAKER (SRI B. VAIKUNTA BALIGA B.A., B.L.) in the Chair.

STARRED QUESTIONS

(to which oral answers were given).

Number of men and women registered in the Employment Exchange.

*Q.—9. SRI C. R. RANGE GOWDA (Magadi).—

Will the Minister for Transport and Tourism be pleased to state :—

(*a*) the number of men and women registered in the Employment Exchange, Bangalore District, during the last three years ;

(*b*) of them, how many are skilled and unskilled, how many are employed under each category ;

(*c*) what are the steps taken to create employment to the unemployed ?

*A.—SRI D. DEVARAJ URS (Minister for Transport and Tourism).—

(*a*) *Vide* Statement appended.

(*b*) *Vide* statement appended.

(*c*) The implementation of the various Plan programmes under the successive Five Year Plans would result in extending employment opportunities.

STATEMENT.

(*a*)— Registration.

Year	Men	Women	Total
1963	52,033	6,414	58,147
1964	38,489	5,686	44,175
1965	47,986	6,075	54,061

(SRI D. DEVARAJ URS)

(b)—

(i) *Registration*

Year	Men			Women		
	Skilled	Unskilled	Total	Skilled	Unskilled	Total
1963	28,389	23,644	52,033	4,202	2,212	6,414
1964	20,620	17,869	38,489	3,453	2,233	5,686
1965	29,638	18,348	47,986	3,949	2,126	6,075

(ii) *Placements*

Year	Men			Women		
	Skilled	Unskilled	Total	Skilled	Unskilled	Total
1963	3,713	808	4,539	437	7	444
1964	2,349	939	3,288	379	9	388
1965	2,783	1,069	3,852	272	4	276

ಶ್ರೀ ಸಿ. ಆರ್. ರಂಗೇಗೌಡ.—ಈ ಮೂರು ಪಂಚವಾರ್ಷಿಕ ಯೋಜನೆಗಳಿಂದ ನಿರುದ್ಯೋಗ ಸಮಸ್ಯೆ ಬಗೆಹರಿದಿದೆ ಎಂದು ಸರ್ಕಾರದ ಖಚಿತವಾದ ಅಭಿಪ್ರಾಯವೇ?

† ಶ್ರೀ ಡಿ. ದೇವರಾಜ ಅರಸ್.—ಪಂಚವಾರ್ಷಿಕ ಯೋಜನೆಗಳಿಂದ ಸಂಪೂರ್ಣವಾಗಿ ನಿರುದ್ಯೋಗವನ್ನು ಬಗೆಹರಿಸಲು ಸಾಧ್ಯವಾಗಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಎಷ್ಟು ನಿರುದ್ಯೋಗ ನಿವಾರಣೆ ಮಾಡಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಸಂಸ್ಥಾನದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಸುಮಾರು 2 ಲಕ್ಷದ 21 ಸಾವಿರ ಜನ ನಿರುದ್ಯೋಗಿಗಳು ಇದ್ದಾರೆ ಎಂದು ಲೆಕ್ಕ ಹಾಕಿದ್ದರು. ಮೊದಲನೆಯ ಪಂಚವರ್ಷ ಯೋಜನೆಯ 5 ವರ್ಷದ ಅವಧಿಯಲ್ಲಿ ಸುಮಾರು 5 ಲಕ್ಷದ 17 ಸಾವಿರ ಜನ ನಿರುದ್ಯೋಗಿಗಳ ಸಂಖ್ಯೆ ಇರುತ್ತದೆ ಎಂದು ಲೆಕ್ಕ ಹಾಕಿದ್ದರು. ಹೀಗೆ ಒಟ್ಟು 7 ಲಕ್ಷ 41 ಸಾವಿರ ಜನರು ನಿರುದ್ಯೋಗಿಗಳು ಇದ್ದರು, ಅದರಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಹೊತ್ತಿಗೆ ಅಂದಾಜು 4 ಲಕ್ಷ ಚಿಲ್ಲರೆ ಜನರಿಗೆ ಕೆಲಸ ದೊರೆಯುವಷ್ಟು ಅವಕಾಶ ವಾಯಿತು. ಇನ್ನು ಉಳಿಕೆಯಾದ ಸುಮಾರು 3 ಲಕ್ಷ 62 ಸಾವಿರ ಜನ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಇದ್ದರು. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 9 ಲಕ್ಷದ 70 ಸಾವಿರ ಜನಕ್ಕೆ ಉದ್ಯೋಗ ಬೇಕು ಎನ್ನುವವರ ಸಂಖ್ಯೆ ಹೆಚ್ಚುತ್ತದೆ ಎಂದು ಅಂದಾಜು ಮಾಡ ಲಾಯಿತು. ಒಟ್ಟು 13 ಲಕ್ಷದ 32 ಸಾವಿರ ಜನ ಆದರು. ಮೂರು ಪಂಚವಾರ್ಷಿಕ ಯೋಜನೆ ಗಳಲ್ಲಿ ನಾವು ಖರ್ಚು ಮಾಡಿದ ಹಣದ ಪರಿಣಾಮವಾಗಿ ಸುಮಾರು 4 ಲಕ್ಷದ 60 ಸಾವಿರ ಜನರಿಗೆ ಕೆಲಸ ಸಿಕ್ಕಿದೆ ಎಂದು ಅಂದಾಜಾಯಿತು. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯ ದಲ್ಲಿ 8 ಲಕ್ಷದ 72 ಸಾವಿರ ಜನ ನಿರುದ್ಯೋಗಿಗಳು ಮತ್ತೆ ಉಳಿದಿದ್ದಾರೆ. ಈಗ 4ನೇ ಪಂಚವಾರ್ಷಿಕ

† Indicates that the remarks or speeches have not been revised by the member concerned

ಯೋಜನೆಗೆ ಸುಮಾರು 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ 10 ಲಕ್ಷ ಜನಕ್ಕೆ ಉದ್ಯೋಗವನ್ನು ಕಲ್ಪಿಸಬಹುದು ಎಂದು ಅಂದಾಜು ಮಾಡಲಾಗಿದೆ. ಈ 3 ಲಕ್ಷದ ಜೊತೆಗೆ ಮತ್ತೆ 8—9 ಲಕ್ಷ ಜನರು ಮತ್ತೆ ಸೇರುತ್ತಾರೆ. ಇದು ಮೈಸೂರು ಸಂಸ್ಥಾನಕ್ಕೆ ಹೊಸದಲ್ಲ, ಇಡೀ ಇಂಡಿಯಾ ದೇಶದಲ್ಲೇ ಈ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಾ ಇದೆ. ಎಷ್ಟೆಷ್ಟು ಹಣ ಖರ್ಚು ಮಾಡಿದರೂ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತಕ್ಷಣ ಈ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ ದೇಶದ ಅಭ್ಯುದಯವನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ ವಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಹೆಚ್ಚು ಹಣ ಖರ್ಚುಮಾಡುವುದಾದರೆ ಎಲ್ಲರಿಗೂ ಉದ್ಯೋಗ ಒದಗಿಸುವುದಕ್ಕೆ ಸಾಧ್ಯ.

ಶ್ರೀ ಸಿದ ಯ್ಯ ಕಾಶೀಮಠ.—ಉದ್ಯೋಗ ಒದಗಿಸುವಾಗ ಹೆಚ್ಚು ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡಿ ಅದರ ಮುಖಾಂತರ ಜನರಿಗೆ ಅಲ್ಲಿ ಅದ್ಯತೆ ಕೊಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಫ್ಯಾಕ್ಟರಿಗಳಲ್ಲಿ ಕೆಲಸ ಕೊಡುತ್ತಾರೆಯಿರ್ಲಾ !

ಶ್ರೀ ಸಿ. ಆರ್. ರಂಗೇಗೌಡ.—ನಿರುದ್ಯೋಗ ಸಮಸ್ಯೆ ಪ್ರತಿ ವರ್ಷ ಜಾಸ್ತಿಯಾಗುತ್ತಿದೆ ಎಂದು ಈಗತಾನೆ ಹೇಳಿದಿರಿ. ಈಗ ಹಾಲಿ ತಾವು ಕೊಡುತ್ತಿರುವ ವಿದ್ಯಾಭ್ಯಾಸದಿಂದ ಈ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತಿಲ್ಲ ಎಂದು ಹೇಳುವುದಾದರೆ, ಬೇರೆ ವಿಧಾನದ ವಿದ್ಯಾಭ್ಯಾಸ ವನ್ನು ಕೊಡುವುದು ಸೂಕ್ತ ಎಂಬುದನ್ನು ಯೋಚನೆ ಮಾಡಲಾಗಿದೆಯೇ ?

ಶ್ರೀ ಡಿ. ದೇವರಾಜ ಅರಸ್ —ವಿದ್ಯಾಭ್ಯಾಸದ ಕ್ರಮ ಬದಲಾವಣೆಯಾದರೆ ಕೂಡಲೇ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ. ನಿರುದ್ಯೋಗಿಗಳಲ್ಲಿ ಸ್ಕಿಲ್ಡ್ ಮತ್ತು ಅನ್‌ಸ್ಕಿಲ್ಡ್ ಇಬ್ಬರೂ ಇದ್ದಾರೆ. ಅದರಲ್ಲಿ ಅವಿದ್ಯಾವಂತ ನಿರುದ್ಯೋಗಿಗಳೂ ಕೂಡ ಇದ್ದಾರೆ.

ಶ್ರೀ ಸಿ ಆರ್. ರಂಗೇಗೌಡ.—ಈ ನಿರುದ್ಯೋಗ ಸಮಸ್ಯೆ ಬೃಹದಾಕಾರವನ್ನು ತಾಳುತ್ತಾ ಇರುವುದರಿಂದ ಇದನ್ನು ನಿವಾರಣೆ ಮಾಡಲಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಲಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅದಕ್ಕೆ ಉಪಾಯಗಳನ್ನು ಕಂಡುಹಿಡಿಯಲಾಗಿದೆ. ಅದೇ ಒಂದು ಎರಡು ಮೂರನೆಯ ಪಂಚವಾರ್ಷಿಕ ಯೋಜನೆಗಳು. 4 ಪಂಚವಾರ್ಷಿಕ ಯೋಜನೆಗೆ 22 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇದೆ. ಅಷ್ಟಾದರೂ ಕೂಡ ನಮ್ಮ ದೇಶದ ಜನಗಳ ಸಂಖ್ಯೆ ನಾಗಾಲೋಟದಲ್ಲಿ ಓಡುತ್ತಾ ಇರುವುದರಿಂದ ಇದನ್ನು ಬಗೆಹರಿಸಬೇಕಾದರೆ ಸ್ವಲ್ಪ ಕಷ್ಟದ ಕೆಲಸ.

Sri P. F. D'MELLOW.—In view of the fact that the ex-service men coming out of the Defence Services with trades peculiar to the defence services finding it difficult to have their trade properly understood, will Government be pleased to consider the necessity of opening a special section for the ex-service men in our Employment Bureau ?

Sri D. DEVARAJ URS.— It is a suggestion for action.

Sri SANJEEVANATH AIKALA.—The Hon'ble Minister said that there is a backlog of 8 lakh and odd unemployed people. Can I have districtwise figures ?

Sri D. DEVARAJ URS.—I require notice.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಮ್ಮ ಸಂಸ್ಥಾನದಲ್ಲಿ ಕೇಂದ್ರ ಮತ್ತು ಸಂಸ್ಥಾನ ಸರ್ಕಾರದವರು ಸ್ಥಾಪನೆ ಮಾಡಿರುವ ಕೈಗಾರಿಕೆಗಳಲ್ಲಿ ಮುವ್ವಾಸು ಅಂದ್ರ ಮತ್ತು ಕೇರಳದ ಜನರಿಗೆ ಹೆಚ್ಚು ಅವಕಾಶ ಕೊಟ್ಟಿರುವುದರಿಂದ ನಮ್ಮ ದೇಶದವರಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿದೆ. ಆದ್ದರಿಂದ ಅವರಿಗೆ ಸಾಧ್ಯವಾದರೆ ಎಲ್ಲಾದರೂ ಅರಣ್ಯ ಪ್ರದೇಶದಲ್ಲಿ ಜಮೀನು ಇದ್ದರೆ ಅಂತಹ ಕಡೆ ಜಮೀನು ಕೊಟ್ಟು ಅವರನ್ನು ವ್ಯವಸಾಯಕ್ಕಾದರೂ ಉಪಯೋಗಿಸಿಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಾ !

ಶ್ರೀ ಡಿ. ದೇವರಾಜ ಅರಸ್.—ಈಗ ವ್ಯವಸಾಯದಲ್ಲಿರತಕ್ಕ ಜನರು ಕಡಿಮೆಯಾಗಬೇಕು ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ನಿರುದ್ಯೋಗ ನಮ್ಮಲ್ಲಿ ತುಂಬಾ ಇದೆ. ಬ್ಯಾಕ್‌ಲಾಗ್ ಹೆಚ್ಚಾಗಿ, ಪ್ರತಿಯೊಂದು ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ಈ ಪ್ರಶ್ನೆಯನ್ನು ಪೂರೈಸಲಕ್ಕೆ ಆಗಿಲ್ಲ. ಅದೇ ಹೊತಿ ಗೆ ನಾವು ನಮ್ಮ ಜನರನ್ನು ಕೆಲಸಕ್ಕೆ ನೇಮಕ ಮಾಡುವುದಕ್ಕೆ ಬದಲಾಗಿ ಕಂಪ್ಯೂಟರ್‌ನ್ನು ತಂದು ಉದ್ಯೋಗಸ್ಥರನ್ನು ಕಡಿಮೆ ಮಾಡುತ್ತಾ ಇದ್ದೇವೆ. ಕೃಷಿಯಲ್ಲಿ ಯಂತ್ರಗಳನ್ನು ತಂದು ಕೃಷಿ ಕೆಲಸ ಮಾಡುವವರ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಇದ್ದೇವೆ. ಈ ಕೆಲವು ವಿಭಾಗಗಳಲ್ಲಿ ಯಂತ್ರಗಳನ್ನು ತಂದು ಉದ್ಯೋಗಗಳನ್ನು ಕಡಿಮೆ ಮಾಡಿ ನಿರುದ್ಯೋಗಗಳನ್ನು ಬೆಳೆಸುವ ಬದಲು ಜನರೇ ಕೆಲಸ ಮಾಡುವ ಹಾಗೆ ಮಾಡಿದರೆ ಏನು ಕಷ್ಟವಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ಯಂತ್ರಗಳ ಸಹಾಯದಿಂದ ವ್ಯವಸಾಯ ಮಾಡುವುದು ಬಹಳ ಕಡಿಮೆ—ಬೇರೆ ದೇಶಗಳಿಗೆ ಹೋಲಿಸಿಕೊಂಡಾಗ ಬಹಳ ಕಡಿಮೆ ಎಂದು ಹೇಳಬಹುದು. ನಾವಿನ್ನೂ ಇಡೀ ವ್ಯವಸಾಯ ಕ್ಷೇತ್ರವನ್ನೆಲ್ಲಾ ಮ್ಯಾಕನೈಸ್ ಮಾಡಬೇಕೆಂದು ಹೊರಟಿಲ್ಲ. ಸರ್ಕಾರದ ಉದ್ದೇಶವೂ ಕೂಡ ಅದಲ್ಲ. ನಮ್ಮ ದೇಶದಲ್ಲಿ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಪ್ಯಾಟ್ರನ್ ಕೂಡ ಅದಕ್ಕೆ ಅನುಕೂಲಕರವಾಗಿಲ್ಲ, ಅದು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಅವರು ಎರ್.ಐ.ಸಿ. ಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಕಂಪ್ಯೂಟರ್ಸ್ ಹಾಕುತ್ತಾರೆ ಎಂಬ ಭಾವನೆಯಿಂದ ಹೇಳಿರಬಹುದು. ಕಂಪ್ಯೂಟರ್ಸ್‌ನ್ನು ಇಟ್ಟುಕೊಂಡು ಅಲ್ಲಿನ ಜನರನ್ನು ತೆಗೆದು ಹಾಕುವುದಿಲ್ಲ ಎಂದು ಈಗಾಗಲೇ ಅವರು ಸಾಕಷ್ಟು ಸಾರಿ ಹೇಳಿದ್ದಾರೆ. ಆ ಸಮಸ್ಯೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕೇಂದ್ರದಿಂದ ಕೊಡಬೇಕಾಗಿರತಕ್ಕ ನೆರವಿನಿಂದ ಸ್ಥಾಪಿಸಬೇಕಾಗಿರತಕ್ಕ ಕೈಗಾರಿಕೆಗಳು ಈ ರಾಜ್ಯದಲ್ಲಿ ಇಲ್ಲದೆ ಇರುವುದರಿಂದ ಈ ನಿರುದ್ಯೋಗ ಸಮಸ್ಯೆ ಇಲ್ಲಿ ಪ್ರಬಲವಾಗಿ ಬೆಳೆದಿರುವುದಕ್ಕೆ ಕಾರಣವಾಗಿದೆಯಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಕೇಂದ್ರದಿಂದ ಸಾಕಾದಷ್ಟು ಕೈಗಾರಿಕೆಗಳು ನಮ್ಮಲ್ಲಿ ಬಂದಿದೆ, ಇನ್ನೂ ಬರುವುದು ಇದೆ.

Workers employed in Beedi Industry

*Q.—30. Sri A. KRISHNA SHETTY (Mangalore II).—

Will the Minister for Transport and Tourism be pleased to state :—

(a) the number of workers employed in Beedi Industry in S. K. District ;

(b) the number of beedi factories and the number employees in these factories in the above district ;

(c) the action taken by the Government to implement minimum wages and to stop contract system in the industry ?

A.—Sri D. DEVARAJ URS (Minister for Transport and Tourism).—

(a) About 40,000.

(b) 17 (Seventeen) registered beedi factories in S. K. District employing about 472 workers and about 40,000 workers outside the factory.

(c) Authorities have been appointed to enforce the provisions of the Minimum Wages Act. There is no specific provision of law prohibiting contract system.